**ದಿನಾಂಕ: 13-04-2010ರಂದು ಪೂರ್ವಾಹ್ನ: 11-00ಗಂಟೆಗೆ ಹೊಯ್ಸಳ ಸಭಾಂಗಣ, ಜಿಲ್ಲಾ ಪಂಚಾಯಿತಿ, ಹಾಸನ ಇಲ್ಲಿ ನಡೆದ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಡವಳಿಗಳು**

**ಅಧ್ಯಕ್ಷರು: ಶ್ರೀಮತಿ ಕಾಮಾಕ್ಷಿರಾಜು**

**ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ**

**ಜಿಲ್ಲಾ ಪಂಚಾಯಿತಿ, ಹಾಸನ.**

ಹಾಜರಿ-06

ಗೈರು ಹಾಜರಿ:01

<table>
<tr><th>ಕ್ರಸಂ</th><th>ವಿಷಯ</th><th>ಚರ್ಚೆ</th><th>ತೀರ್ಮಾನ</th></tr>
<tr><td></td><td></td><td>ಮುಖ್ಯ ಯೋಜನಾಧಿಕಾರಿಯವರು ಸಭೆಗೆ ಮಾನ್ಯ ಸಮಿತಿ ಅಧ್ಯಕ್ಷರು, ಸದಸ್ಯರು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಸಮಿತಿ ಅಧ್ಯಕ್ಷರನ್ನು ಕೋರಿದರು.</td><td></td></tr>
<tr><td>1</td><td>ಜನವರಿ 2010 ಹಾಗೂ ಫೆಬ್ರವರಿ 2010 ರ ಮಾಹೆಯ ಮಾಸಿಕ ಲೆಕ್ಕ ಅನುಮೋದನೆಗೆ</td><td>ಟಿಪ್ಪಣಿ ಸಂಖ್ಯೆ: ಜಿಪಂಹಾ/ ಆರ್ಥಿಕ/ಸಂಕಲನ/ಮಾಸಿಕ ಲೆಕ್ಕ-1/2009-10 ದಿನಾಂಕ:06-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮುಖ್ಯ ಲೆಕ್ಕಾಧಿಕಾರಿಯವರು ಜಿಲ್ಲಾ ಪಂಚಾಯತ್ ಹಾಸನದ ಜನವರಿ 2010 ಹಾಗೂ ಫೆಬ್ರವರಿ 2010ರ ಮಾಹೆಯ ಜಮಾ ಮತ್ತು ಖರ್ಚಿನ ತ:ಖ್ತೆಗಳು ಚಲನ್ ಮತ್ತು ಓಚರ್‌ಗಳು ಸ್ವೀಕೃತವಾಗಿರುತ್ತದೆ. ಖಜಾನೆಯಿಂದ ಸ್ವೀಕೃತವಾದ ಒಟ್ಟು ಜಮೆ ಮತ್ತು ಖರ್ಚಿನ ವಿವರಗಳನ್ನು ಪ್ರಧಾನ ಲೆಕ್ಕಶೀರ್ಷಿಕೆವಾರು ಸಂಕಲನ ಗಣಕೀಕರಣದಲ್ಲಿ ತಯಾರಿಸಲಾಗಿದೆ. ಸದರಿ ಸಂಕಲನದ ತ:ಖ್ತೆಯ ವಿವರ ರಾಜಸ್ವ ಜಮೆ ವೆಚ್ಚ ಬಂಡವಾಳ ವೆಚ್ಚ ಮತ್ತು ಜಮಾ ಶೀರ್ಷಿಕೆಗಳ ಲೆಕ್ಕ, ಜಿಲ್ಲಾ ಪಂಚಾಯಿತಿಯ ಒಟ್ಟು ಜಮಾ ಮತ್ತು ಖರ್ಚಿನ ವಿವರ ಕೆಳಗಿನಂತಿದೆ. ಜನವರಿ 2010 ಹಾಗೂ ಫೆಬ್ರವರಿ 2010ರ ಮಾಹೆಯ ಲೆಕ್ಕ ವಿವರ ಹಣಕಾಸು, ಆಡಿಟ್ ಮತ್ತು ಯೋಜನಾ ಸ್ಥಾಯಿ ಸಮಿತಿಗೆ ಅನುಮೋದನೆ ನೀಡಲು ಮಂಡಿಸಿದೆ.
<table>
<tr><td>ವಿವರ</td><td>ಜನವರಿ 2010</td><td>ಫೆಬ್ರವರಿ 2010</td></tr>
<tr><td>ಜಮೆ</td><td>119,999,129.00</td><td>184,581,36.00</td></tr>
<tr><td>ಖರ್ಚು</td><td>136,110,603.00</td><td>134,010,733.00</td></tr>
</table></td><td>ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಮುಖ್ಯ ಲೆಕ್ಕಾಧಿಕಾರಿಯವರು ಕೋರಿರುವಂತೆ ಜಿಲ್ಲಾ ಪಂಚಾಯತ್ ಹಾಸನದ ಜನವರಿ 2010 ಹಾಗೂ ಫೆಬ್ರವರಿ 2010ರ ಮಾಹೆಯ ಜಮಾ ಮತ್ತು ಖರ್ಚಿನ ಮಾಸಿಕ ಲೆಕ್ಕದ ವಿವರಗಳಿಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.
<table>
<tr><th>ವಿವರ</th><th>ಜನವರಿ 2010</th><th>ಫೆಬ್ರವರಿ 2010</th></tr>
<tr><td>ಜಮೆ</td><td>119,999,129.00</td><td>184,581,36.00</td></tr>
<tr><td>ಖರ್ಚು</td><td>136,110,603.00</td><td>134,010,733.00</td></tr>
</table></td></tr>
</table>

| | | | |
|---|---|---|---|
| 2 | ಜಿಲ್ಲಾ ಪಂಚಾಯತ್ ಹಾಸನಕ್ಕೆ 2009-10ನೇ ಸಾಲಿನ ಆರ್ಥಿಕ ಇಲಾಖೆ ಅನುದಾನ ಹಾಗೂ ಇತರೆ ಅನುದಾನಗಳ ಜಮೆ ವಿವರ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆರ್ಥಿಕ/ಆವ್ಯ:ಅಧೀ:1/4:ಹಸ:ಟಿಪ್ಪಣಿ 2010-11 ದಿನಾಂಕ: 06-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಮುಖ್ಯ ಲೆಕ್ಕಾಧಿಕಾರಿಯವರು ಜಿಲ್ಲಾ ಪಂಚಾಯಿತಿ, ಹಾಸನಕ್ಕೆ ಆರ್ಥಿಕ ಇಲಾಖೆಯಿಂದ ಲಿಂಕ್ ಡಾಕ್ಯುಮೆಂಟ್ ಅನುದಾನ/ ಇಲಾಖೆ ಅನುದಾನ/ ಹೆಚ್ಚುವರಿ ಅನುದಾನ/ ಕೇಂದ್ರ ಪುರಸ್ಕೃತ ಅನುದಾನಗಳು/ ರಸ್ತೆ ಅಭಿವೃದ್ಧಿ ಅನುದಾನ ಹಾಗೂ ಇತರೆ ಅನುದಾನಗಳು ಬಿಡುಗಡೆಯಾಗಿರುವ ಬಗ್ಗೆ ಸಭೆಯ ಅವಗಾಹನೆಗೆ ಸಲ್ಲಿಸಿದರು. | ಜಿಲ್ಲಾ ಪಂಚಾಯಿತಿ, ಹಾಸನಕ್ಕೆ ಆರ್ಥಿಕ ಇಲಾಖೆಯಿಂದ ಬಿಡುಗಡೆಯಾಗಿರುವ ಲಿಂಕ್ ಡಾಕ್ಯುಮೆಂಟಿನಲ್ಲಿ ಜಿಲ್ಲಾ ಪಂಚಾಯಿತಿಗೆ ನಿಗದಿಯಾಗಿರುವ ಯೋಜನೆ ಮತ್ತು ಯೋಜನೇತರ ಅನುದಾನ ಇಲಾಖಾವಾರು ಅನುದಾನಗಳನ್ನು ಭೆಯು ಅವಗಾಹಿಸಿತು. |
| 3 | ಜೂನ್ ಮೊದಲನೇ ವಾರದಲ್ಲಿ ಜಮ್ಮು ಕಾಶ್ಮೀರದ ಶ್ರೀನಗರದಲ್ಲಿ ನಡೆಯುವ 31ನೇ ರಾಷ್ಟ್ರೀಯ ಹಿರಿಯರ ಅಥ್ಲೆಟಿಕ್ಸ್ ಚಾಂಪಿಯನ್ ಶಿಪ್ ಸ್ಪರ್ಧೆಯಲ್ಲಿ ಭಾಗ ವಹಿಸುವ 35 ಜನ ಹಿರಿಯ ಕ್ರೀಡಾಪಟುಗಳಿಗೆ ಧನ ಸಹಾಯ ನೀಡುವ ಬಗ್ಗೆ | ಟಿಪ್ಪಣಿ ಸಂಖ್ಯೆ: ಜಿಪಂಹಾ/ಆ(8) ವಂತಿಕೆ-1/2010-11 ದಿನಾಂಕ: 09-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ದಿನಾಂಕ: 09-06-2010ರಿಂದ 13-06-2010ರವರೆಗೆ ಭಾರತ ಹಿರಿಯರ ಅಥ್ಲೆಟಿಕ್ಸ್ ಸಂಸ್ಥೆ ಆಶ್ರಯದಲ್ಲಿ ಜಮ್ಮು ಕಾಶ್ಮೀರದ ಶ್ರೀ ನಗರದಲ್ಲಿ ನಡೆಯುವ 31ನೇ ರಾಷ್ಟ್ರಮಟ್ಟದ ಹಿರಿಯ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಹಾಸನ ಜಿಲ್ಲೆಯಿಂದ 26 ಪುರುಷರು 9 ಮಹಿಳೆಯರು, ಕರ್ನಾಟಕ ರಾಜ್ಯ ತಂಡದ ವತಿಯಿಂದ ರಾಜ್ಯ ಮಟ್ಟದಲ್ಲಿ ಆಯ್ಕೆಯಾಗಿ ಭಾಗವಹಿಸುತ್ತಿದ್ದು, ಸದರಿ ತಂಡಕ್ಕೆ ಪ್ರಯಾಣ ಭತ್ಯೆ ಮತ್ತು ಊಟದ ವೆಚ್ಚ ಕ್ರೀಡಾ ಸಮವಸ್ತ್ರಗಳನ್ನು ಭರಿಸುವ ಸಲುವಾಗಿ ಜಿಲ್ಲಾ ಪಂಚಾಯಿತಿಯಿಂದ ಧನ ಸಹಾಯ ನೀಡುವಂತೆ ಕಾರ್ಯದರ್ಶಿ, ಹಾಸನ ಜಿಲ್ಲಾ ಹಿರಿಯರ ಕ್ರೀಡಾ ಸಂಸ್ಥೆ, ಹಾಸನ ಇವರು ಮನವಿ ಸಲ್ಲಿಸಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಪರಿಶೀಲಿಸಲಾಯಿತು.<br>ದಿನಾಂಕ: 09-06-2010ರಿಂದ 13-06-2010ರವರೆಗೆ ಭಾರತ ಹಿರಿಯರ ಅಥ್ಲೆಟಿಕ್ಸ್ ಸಂಸ್ಥೆ ಆಶ್ರಯದಲ್ಲಿ ಜಮ್ಮು ಕಾಶ್ಮೀರದ ಶ್ರೀ ನಗರದಲ್ಲಿ ನಡೆಯುವ 31ನೇ ರಾಷ್ಟ್ರಮಟ್ಟದ ಹಿರಿಯ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಸ್ಪರ್ಧೆಯಲ್ಲಿ ಹಾಸನ ಜಿಲ್ಲೆಯಿಂದ ಆಯ್ಕೆಯಾಗಿರುವ 35 ಜನರಿಗೆ ಸ್ಪರ್ಧೆಯಲ್ಲಿ ಭಾಗ ವಹಿಸಲು ಅನುಕೂಲವಾಗುವಂತೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.10,000.00(ರೂಪಾಯಿ ಹತ್ತು ಸಾವಿರ ಮಾತ್ರ)ಗಳ ಧನ ಸಹಾಯವನ್ನು ಕಾರ್ಯದರ್ಶಿ, ಹಾಸನ ಜಿಲ್ಲಾ ಹಿರಿಯರ ಕ್ರೀಡಾ ಸಂಸ್ಥೆ, ಹಾಸನ ಇವರಿಗೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| 4 | ಶ್ರೀ ಹೆಚ್.ಎನ್.ಅರ್ಜುನ್, ಕೋಟೆ ಹೊಳೆನರಸೀಪುರ ಇವರು ಕುಸ್ತಿಪಂದ್ಯದಲ್ಲಿ ಭಾಗವಹಿಸಲು ಧನ ಸಹಾಯ ನೀಡುವ ಬಗ್ಗೆ. | ಟಿಪ್ಪಣಿ ಸಂಖ್ಯೆ; ಜಿಪಂಹಾ/ಆ(8)ವಂತಿಕೆ-1/2010-11 ದಿನಾಂಕ: 09-04-2010ನ್ನು ಸಭೆಯಲ್ಲಿ ಮಂಡಿಸಲಾಯಿತು.<br>ಶ್ರೀ ಹೆಚ್.ಎನ್.ಅರ್ಜುನ್ ಬಿನ್ ಎಸ್.ಜೆ. ನಾಗರಾಜು, ಕೋಟೆ ಹೊಳೆನರಸೀಪುರ ಇವರು ಉತ್ತಮ ಕುಸ್ತಿಪಟುವಾಗಿದ್ದು, ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ಕುಸ್ತಿಪಂದ್ಯಗಳಲ್ಲಿ ಭಾಗವಹಿಸಿದ್ದು, ದಿನಾಂಕ: 04-04-2010ರಿಂದ ಬೈಲಹೊಂಗಲ, ಬೆಳಗಾವಿ ಜಿಲ್ಲೆ, ಇಲ್ಲಿ ಆರಂಭವಾಗುತ್ತಿರುವ ಕುಸ್ತಿಪಂದ್ಯದಲ್ಲಿ ಭಾಗವಹಿಸುವ ಸಂಬಂಧ ಜಿಲ್ಲಾ ಪಂಚಾಯತ್ ವತಿಯಿಂದ ಧನಸಹಾಯ ನೀಡಬೇಕೆಂದು ಮಾನ್ಯ ಶಾಸಕರು, ಹೊಳೆನರಸೀಪುರ ಕ್ಷೇತ್ರ ಇವರು ಕೋರಿರುತ್ತಾರೆ. | ಸಭೆಯಲ್ಲಿ ವಿಷಯದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು.<br>ಶ್ರೀ ಹೆಚ್.ಎನ್.ಅರ್ಜುನ್ ಬಿನ್ ಎಸ್.ಜೆ. ನಾಗರಾಜು, ಕೋಟೆ ಹೊಳೆನರಸೀಪುರ ಇವರು ದಿನಾಂಕ: 04-04-2010ರಿಂದ ಬೈಲಹೊಂಗಲ, ಬೆಳಗಾವಿ ಜಿಲ್ಲೆ, ಇಲ್ಲಿ ಆರಂಭವಾಗುತ್ತಿರುವ ಕುಸ್ತಿಪಂದ್ಯದಲ್ಲಿ ಭಾಗವಹಿಸುವ ಸಂಬಂಧ ಜಿಲ್ಲಾ ಪಂಚಾಯತ್ ವತಿಯಿಂದ ರೂ.2000/-(ರೂಪಾಯಿ ಎರಡು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯು ಸರ್ವಾನುಮತದಿಂದ |

| | | | |
|---|---|---|---|
| | | | ತೀರ್ಮಾನಿಸಿತು ಮತ್ತು ಶ್ರೀ ಹೆಚ್.ಎನ್.ಅರ್ಜುನ್‌ರವರು ಕುಸ್ತಿಪಂದ್ಯದಲ್ಲಿ ಭಾಗವಹಿಸಿರುವ ಬಗ್ಗೆ ದೃಢೀಕರಣವನ್ನು ಪಡೆಯಲು ಅಗತ್ಯ ಕ್ರಮ ವಹಿಸುವಂತೆ ಸಹಾಯಕ ನಿರ್ದೇಶಕರು, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ, ಹಾಸನ ಇವರಿಗೆ ಸೂಚಿಸಲಾಯಿತು. |
| 1 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು** | | |
| | ಕರ್ನಾಟಕ ಜಾನಪದ ಪರಿಷತ್ತಿನ ಹಾಸನ ಜಿಲ್ಲಾ ಘಟಕದ ವತಿಯಿಂದ ಜಿಲ್ಲೆಯಲ್ಲಿ ಏಪ್ರಿಲ್ 25 ರಿಂದ 29 ರವರೆಗೆ ನಡೆಯಲಿರುವ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಆರ್ಥಿಕ ಸಹಾಯ ಕೋರಿ | ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು, ಹಾಸನ ಜಿಲ್ಲಾ ಸಮಿತಿ, ಹಾಸನ ಇವರು ಕರ್ನಾಟಕ ಜಾನಪದ ಪರಿಷತ್ತಿನ ಹಾಸನ ಜಿಲ್ಲಾ ಘಟಕ ಅಸ್ತಿತ್ವಕ್ಕೆ ಬಂದ ತರುವಾಯ ಮೊದಲ ಕಾರ್ಯಕ್ರಮವಾಗಿ ದಿನಾಂಕ: 25-04-2010ರಿಂದ 29-04-2010ರವರೆಗೆ ಹಾಸನ ಜಿಲ್ಲೆಯಲ್ಲಿ 5 ದಿನಗಳ ಕಾಲ ಸಾಂಸ್ಕೃತಿಕ ಉತ್ಸವವನ್ನು ನಡೆಸಲು ವ್ಯವಸ್ಥೆಗೊಳಿಸಿದ್ದು, ಈ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.25000/-ಗಳ ಸಹಾಯಧನವನ್ನು ನೀಡುವಂತೆ ದಿನಾಂಕ: 06-04-2010ರಂದು ಮನವಿಯನ್ನು ಸಲ್ಲಿಸಿದ್ದು, ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯಿತಿ, ಹಾಸನ ಇವರು ಅಗತ್ಯ ವಂತಿಕೆಯನ್ನು ಬಿಡುಗಡೆ ಮಾಡುವಂತೆ ತಿಳಿಸಿದರು. | ವಿಷಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಪರಿಶೀಲಿಸಲಾಯಿತು.<br>ಅಧ್ಯಕ್ಷರು , ಕರ್ನಾಟಕ ಜಾನಪದ ಪರಿಷತ್ತು, ಹಾಸನ ಜಿಲ್ಲಾ ಸಮಿತಿ, ಹಾಸನ ಇವರು ಕೋರಿರುವಂತೆ ಹಾಸನ ಜಿಲ್ಲೆಯಲ್ಲಿ ದಿನಾಂಕ: 25-04-2010ರಿಂದ 29-04-2010ರವರೆಗೆ ನಡೆಸಲು ಉದ್ದೇಶಿಸಿರುವ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ರೂ.5000/-(ರೂಪಾಯಿ ಐದು ಸಾವಿರ ಮಾತ್ರ)ಗಳ ಧನಸಹಾಯವನ್ನು ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು. |
| | ಮುಖ್ಯ ಯೋಜನಾಧಿಕಾರಿಯವರು 2010-11ನೇ ಸಾಲಿಗೆ ವಿವಿಧ ಇಲಾಖೆಗಳ ಯೋಜನೆಗಳಿಗೆ ಲಿಂಕ್ ಡಾಕ್ಯುಮೆಂಟ್‌ನಲ್ಲಿ ನಿಗದಿಪಡಿಸಿರುವ ಅನುದಾನದ ವಿವರಗಳನ್ನು ಸಭೆಯ ಗಮನಕ್ಕೆ ತಂದರು ಮತ್ತು ಇಲಾಖಾ ಮುಖ್ಯಸ್ಥರು ನಿಗದಿಪಡಿಸಿರುವ ಅನುದಾನಕ್ಕೆ ಸಂಬಂಧಿಸಿದಂತೆ, ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಸಂಬಂಧಪಟ್ಟ ಸ್ಥಾಯಿ ಸಮಿತಿ ಸಭೆಯಲ್ಲಿ ಮಂಡಿಸಲು ಕ್ರಮ ವಹಿಸಬೇಕೆಂದು ತಿಳಿಸಲಾಗಿದೆ ಎಂದು ಸಭೆಗೆ ತಿಳಿಸಿದರು.<br>ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ಇವರು ಮಾತನಾಡುತ್ತಾ, ಅನುದಾನಿತ ಶಾಲೆಗಳಿಗೆ ಬಹಳ ಕಡಿಮೆ ಅನುದಾನವನ್ನು ನಿಗದಿಪಡಿಸಿರುತ್ತಾರೆಂದು ಸಭೆಯ ಗಮಕ್ಕೆ ತಂದರು.<br>ಮುಖ್ಯ ಯೋಜನಾಧಿಕಾರಿಯವರು ಮಾತನಾಡುತ್ತಾ, ಈಗಲೇ ಅವಶ್ಯ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮ ವಹಿಸಬೇಕೆಂದು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಹಾಸನ ಇವರಿಗೆ ತಿಳಿಸಿದರು.<br>ಮಾನ್ಯ ಸದಸ್ಯರಾದ ಶ್ರೀ ಹೆಚ್.ಅಣ್ಣಪ್ಪಶೆಟ್ಟರವರು ಮಾತನಾಡುತ್ತಾ, ಅಂಗನವಾಡಿ ಕೇಂದ್ರಗಳಲ್ಲಿ ಗರ್ಭಿಣಿಯರಿಗೆ ಮತ್ತು ಮಕ್ಕಳಿಗೆ ನೀಡುತ್ತಿರುವ ಆಹಾರವು ತುಂಬಾ ಕಳಪೆ ಮಟ್ಟದಲ್ಲಿರುವುದರಿಂದ, ಅದನ್ನು ಮಕ್ಕಳಾಗಲಿ ಅಥವಾ ಗರ್ಭಿಣಿಯರಾಗಲಿ ತಿನ್ನುತ್ತಿಲ್ಲ. ಈ ಬಗ್ಗೆ ಕ್ರಮ ವಹಿಸಬೇಕೆಂದು ತಿಳಿಸಿದರು.<br>ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರು ಉತ್ತರಿಸುತ್ತಾ, ಈ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಎಂದು ವಿವರ ನೀಡಿದರು. | | |

| | |
|---|---|
| | ಮಾನ್ಯ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರುಗಳು ಹೊಳೆನರಸೀಪುರದಲ್ಲಿ ಮಾಸಾಶನ ನೀಡುತ್ತಿರುವ ಕುಸ್ತಿಪಟುಗಳ ಕುರಿತು ಪರಿಶೀಲನೆ ನಡೆಸಬೇಕೆಂದು ಸಹಾಯಕ ನಿರ್ದೇಶಕರು, ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ, ಹಾಸನ ಇವರಿಗೆ ಸೂಚಿಸಿದರು.<br>ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ಕುಮಾರಸ್ವಾಮಿರವರು ಮಾತನಾಡುತ್ತಾ, ಕೆಲವು ಪ್ರಾಥಮಿಕ ಆರೋಗ್ಯ ಕೇಂದ್ರ/ ಪ್ರಾಥಮಿಕ ಆರೋಗ್ಯ ಘಟಕಗಳ ಆರೋಗ್ಯ ರಕ್ಷಾ ಸಮಿತಿಗೆ ಬಿಡುಗಡೆ ಮಾಡಿರುವ ಅನುದಾನವನ್ನು ತಾಂತ್ರಿಕ ತೊಂದರೆಯಿಂದಾಗಿ ವಿನಿಯೋಗ ಮಾಡಿರುವುದಿಲ್ಲ. ಈ ಬಗ್ಗೆ ಪರಿಶೀಲಿಸಿ, ಕ್ರಮ ವಹಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಹಾಸನ ಇವರಿಗೆ ತಿಳಿಸಿದರು.<br>ಮಾನ್ಯ ಸದಸ್ಯರಾದ ಶ್ರೀ ಹುಚ್ಚೇಗೌಡರವರು ಮಾತನಾಡುತ್ತಾ, ಕೆಂಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ರಕ್ಷಾ ಸಮಿತಿಗೆ ಬಿಡುಗಡೆಯಾಗಿದ್ದ ಅನುದಾನ ಖರ್ಚಾಗಿರುವುದಿಲ್ಲ. ಈ ಬಗ್ಗೆ ಪರಿಶೀಲಿಸಿ ಕ್ರಮ ವಹಿಸಬೇಕೆಂದು ತಿಳಿಸಿದರು.<br>ಮಾನ್ಯ ಸಮಿತಿ ಸದಸ್ಯರುಗಳು 12ನೇ ಹಣಕಾಸು ರಸ್ತೆ ಯೋಜನೆಯಡಿಯಲ್ಲಿ ಹಣ ಬಿಡುಗಡೆಯಾಗದೆ ಬಿಲ್ ಪಾವತಿ ಆಗಿರುವುದಿಲ್ಲ. ಈ ಬಗ್ಗೆ ವಿವರ ನೀಡಬೇಕೆಂದು ಕೋರಿದರು.<br>ಮುಖ್ಯ ಯೋಜನಧಿಕಾರಿಯವರು ಉತ್ತರಿಸುತ್ತಾ, 12ನೇ ಹಣಕಾಸು ಯೋಜನೆಯಡಿಯಲ್ಲಿ ಸುಮಾರು ರೂ.1.78ಕೋಟಿ ಹಣ ಬಿಡುಗಡೆಯಾಗಿರುವುದಿಲ್ಲ. ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.<br>ಮಾನ್ಯ ಸದಸ್ಯರಾದ ಶ್ರೀಮತಿ ಪ್ರೇಮಾ ನಿಂಗಪ್ಪರವರು ಮಾತನಾಡುತ್ತಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಅಂಗನವಾಡಿ ಕೇಂದ್ರಗಳ ಕಟ್ಟಡ ನಿರ್ಮಾಣಕ್ಕೆ ತಾಲ್ಲೂಕು ಪಂಚಾಯಿತಿ ಕಾರ್ಯಕ್ರಮದಡಿಯಲ್ಲಿ ಪ್ರತಿ ಅಂಗನವಾಡಿ ಕಟ್ಟಡಕ್ಕೆ ಕೇವಲ ರೂ.50000/-ಗಳನ್ನು ನಿಗದಿಪಡಿಸಿದ್ದು, ಇದರಲ್ಲಿ ಕಟ್ಟಡವನ್ನು ನಿರ್ಮಿಸಲು ಸಾಧ್ಯವಿರುವುದಿಲ್ಲ. ಆದ್ದರಿಂದ, ಈ ಬಗ್ಗೆ ಇಲಾಖೆ ಅಧಿಕಾರಿಗಳು ರಾಜ್ಯ ಮಟ್ಟದ ಸಭೆಯಲ್ಲಿ ಹಿರಿಯ ಅಧಿಕಾರಿಗಳ ಗಮನಕ್ಕೆ ತರಬೇಕೆಂದು ತಿಳಿಸಿದರು.<br>ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಹಾಸನ ಇವರು ಮಾತನಾಡುತ್ತಾ, ಈ ಬಗ್ಗೆ 2 ಬಾರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಇದು ಪಾಲಿಸಿ ವಿಷಯವಾಗಿರುವುದರಿಂದ, ಸರ್ಕಾರದ ಹಂತದಲ್ಲಿ ಕ್ರಮ ವಹಿಸಬೇಕಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.<br>ಮಾನ್ಯ ಸದಸ್ಯರಾದ ಶ್ರೀ ಹುಚ್ಚೇಗೌಡರವರು ಮಾತನಾಡುತ್ತಾ, ತಾಲ್ಲೂಕು ಪಂಚಾಯಿತಿಯಲ್ಲಿ ಗ್ರಾಮೀಣ ಮಾರುಕಟ್ಟೆ ಅಭಿವೃದ್ಧಿಗೆ ನಿಗದಿಪಡಿಸಿರುವ ಅನುದಾನದಲ್ಲಿ, ತಾಲ್ಲೂಕು ಪಂಚಾಯಿತಿ ಸದ್ಯರುಗಳುಲ ಗ್ರಾಮೀಣ ಪ್ರದೇಶಗಳ ಮಾರುಕಟ್ಟೆಯನ್ನು ಅಭಿವೃದ್ಧಿ ಪಡಿಸದೆ, ಎಪಿಎಂಸಿ ಮಾರುಕಟ್ಟೆಯಲ್ಲಿ ಅಭಿವೃದ್ಧಿಯನ್ನು ಮಾಡುತ್ತಿದ್ದಾರೆ. ಆದರೆ, ಎಪಿಎಂಸಿ ಯಲ್ಲಿಯೇ ಸಾಕಷ್ಟು ಅನುದಾನ ಲಭ್ಯವಿರುತ್ತದೆ. ಆದ್ದರಿಂದ, ಗ್ರಾಮೀಣ ಮಾರುಕಟ್ಟೆ ಅಭಿವೃದ್ಧಿ ಅನುದಾನವನ್ನು ಬೇರೆ ಕಾಮಗಾರಿಗಳಿಗೆ ವಿನಿಯೋಗಿಸುವುದು ಸೂಕ್ತವೆಂದು ತಿಳಿಸಿದರು. |
| | ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು. |

(ಕಾಮಾಕ್ಷಿರಾಜು)
ಅಧ್ಯಕ್ಷರು
ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜಾ ಸ್ಥಾಯಿ ಸಮಿತಿ
ಜಿಲ್ಲಾ ಪಂಚಾಯಿತಿ, ಹಾಸನ.